ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ, ಯುವಜನ ಸೇವೆ, ಕ್ರೀಡೆ, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಯಾವುದೂ ಇಲ್ಲ.

ಆ) ೧೧.

ಇ) ಹನ್ನೊಂದರಲ್ಲಿ ೧೦ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ಪ್ರತ್ಯೇಕ ಕಟ್ಟಡಗಳು ಇರುವುದಿಲ್ಲ. ಒಂದು ಸ್ವತಂತ್ರ ಕಿರಿಯ ಕಾಲೇಜು ಪ್ರಾಥಮಿಕ ಶಾಲೆಯ ಕಟ್ಟಡದಲ್ಲಿ ನಡೆಯುತ್ತಿತ್ತು. ಈ ಕಟ್ಟಡಗಳು ಬೇರೆ ಉದ್ದೇಶಗಳಿಗೆ ಲಭ್ಯವಿರುವುದಿಲ್ಲ.

ಮನೆಗಳ ಹಂಚಿಕೆಯಲ್ಲಾಗಿರುವ ವಿಳಂಬದ ಬಗ್ಗೆ

೭೮೬ (೧೫೪೬) ಶ್ರೀಮತಿ ದಮಯಂತಿ ಜೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮನೆಗಳನ್ನು ಮಂಜೂರಾತಿದಾರರಿಗೆ ಪಹಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣವೇನು?

ಆ) ವಿಳಂಬವಾದ ಬಾಕಿ ಹಣಕ್ಕೆ ಮಂಜೂರಾತಿದಾರರಿಗೆ ಚಕ್ರಬಡ್ಡಿ ವಿಧಿಸುವುದಿಲ್ಲವೇ?

ಇ) ಹಾಗಿದ್ದಲ್ಲಿ, ಮನೆಗಳನ್ನು ಪಹಿಸಿಕೊಡಲು ವಿಳಂಬವಾಗಿರುವುದರಿಂದ ಚಕ್ರಬಡ್ಡಿ ವಿಧಿಸಲು ಸಮರ್ಥನೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಒಳಚರಂಡಿ ವ್ಯವಸ್ಥೆ, ನೀರಿನ ಸರಬರಾಜು ಹಾಗೂ ವಿದ್ಯುಚ್ಛಕ್ತಿ ಪೂರೈಕೆಯನ್ನು ವ್ಯವಸ್ಥೆ ಮಾಡಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗಳು ತಡಮಾಡಿದುದೇ ಮನೆಗಳನ್ನು ಮಂಜೂರಾತಿದಾರರಿಗೆ ಪಹಿಸಲು ಆಗುತ್ತಿರುವ ವಿಳಂಬಕ್ಕೆ ಮೂಲಕಾರಣ.

ಆ) ವಿಳಂಬ ಪಾವತಿಗೆ ನಿಯಮಾವಳಿಗಳ ಪ್ರಕಾರ ಬಡ್ಡಿ ವಿಧಿಸಿದೆ.

ಇ) ಉದ್ಭವಿಸುವುದಿಲ್ಲ.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನಲ್ಲಿರುವ ಎರಡು ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತೇನೆ. ಅವು ಈ ರೀತಿ ಇವೆ.—

೧) ಗುಬ್ಬಿ ತಾಲ್ಲೂಕು ಸಿ.ಎಸ್. ಪುರಹೋಬಳಿ ಇದಗೂರಿಗೆ ರಸ್ತೆ ಸೌಲಭ್ಯವನ್ನು ಉತ್ತಮ ಪಡಿಸುವ ಬಗ್ಗೆ.

೨) ಗುಬ್ಬಿ ತಾಲ್ಲೂಕು ಸಿ.ಎಸ್. ಪುರ ಹೋಬಳಿ ಇದಗೂರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವ ಬಗ್ಗೆ.

ಅಧ್ಯಕ್ಷರು.—ಸಭೆಗೆ ಅರ್ಜಿಗಳನ್ನು ಒಪ್ಪಿಸಲಾಯಿತು. ಈಗ ಸಭೆ ಎದ್ದು ೨-೧೫ಕ್ಕೆ ಮತ್ತೆ ಸಮಾವೇಶಗೊಳ್ಳುತ್ತದೆ.

(ಸದನವು ೧-೧೫ಕ್ಕೆ ಮುಂಕ್ರಾಯವಾಗಿ ಮತ್ತೆ ೨-೧೫ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು). ಸದನವು ಪುನಃ ಮಧ್ಯಾಹ್ನ ೨-೧೫ಕ್ಕೆ ಸಮಾವೇಶಗೊಂಡಿತು

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)